ಅ) ಜಿಲ್ಲಾ ಪರಿಷತ್ ಆಯವ್ಯಯದಲ್ಲಿ ತಾಲೂಕು ಮತ್ತು ಜಿಲ್ಲಾ ಮಟ್ಟದ ಯುವಕ ರ್ಯಾಲಿಯನ್ನು ನಡೆಸಲು ೩.೬೯ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ ರಾಜ್ಯದಲ್ಲಿ ವಿಭಾಗೀಯ ಮತ್ತು ರಾಜ್ಯಮಟ್ಟದ ರ್ಯಾಲಿಯನ್ನು ನಡೆಸಲು ರೂ. ೧.೦೯ ಲಕ್ಷಗಳನ್ನು ಮತ್ತು ರಾಜ್ಯ ಯುವಕ ಪ್ರಶಸ್ತಿಯನ್ನು ನೀಡಲು ರೂ. ೧.೨೫ ಲಕ್ಷ ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ವಿಷಯ : ಮಂಡ್ಯ ನಗರದ ಕಲಾ ಮಂದಿರದ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೬೯ (೧೧೧೭)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡ್ಯ ನಗರದಲ್ಲಿ ನಿರ್ಮಾಣವಾಗುತ್ತಿರುವ ಕಲಾ ಮಂದಿರದ ಅಂದಾಜು ಮೊಬಲಗೆಷ್ಟು ?

ಆ) ಈ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಯಿತು ?

ಇ) ಪ್ರಸ್ತುತ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಈ ವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು) : ಅ) ೧೭.೦೦ ಲಕ್ಷ ರೂ. ಗಳು

ಆ) ೧೯೮೯-೯೦ರಲ್ಲಿ ಪ್ರಾರಂಭವಾಯಿತು.

ಇ) ತಳಹದಿ ಹಂತದವರೆಗೆ ಬಂದಿದೆ ಈವರೆಗೆ ರೂ. ೫.೮೨ ಲಕ್ಷ ಖರ್ಚಾಗಿದೆ.

ವಿಷಯ : ಡಿಸೈಲ್ ಬೆಲೆ ಏರಿಕೆಯಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಆದ ಹಾನಿಯ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೭೦ (೧೦೨೦)

ಶ್ರೀ ಶಿವಾನಂದ ಹೆಜ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಡಿಸೈಲ್ ಬೆಲೆ ಏರಿಕೆಯಿಂದಾಗಿ ಬಸ್ಸುಗಳನ್ನು ರದ್ದು ಪಡಿಸಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಆದ ಹಾನಿ ಎಷ್ಟು ?

ಆ) ಬೆಳಗಾವಿ ವಿಭಾಗದಲ್ಲಿ ಎಷ್ಟು ಬಸ್ಸುಗಳನ್ನು ರದ್ದು ಪಡಿಸಲಾಗಿದೆ ?

ಇ) ಬಸ್ಸುಗಳನ್ನು ರದ್ದು ಪಡಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?